ಸಾಕ್ಷಿಗೆ ದಿಃ **04.02.2025** ರಂದು ಪ್ರಮಾಣ ವಚನ ಭೋದಿಸಲಾಯಿತು

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವಿ ಪಿ ವಕೀಲರಿಂದಃ**

6. ಮೃತ ಚಂದನ್ ದಾಸ್ ಇವರಿಗೆ ಮನೆಯನ್ನು ಬಾಡಿಗೆ ನೀಡಿದ ಬಗ್ಗೆ ಬಾಡಿಗೆ ಕರಾರು ಪತ್ರ ಮಾಡಿಕೊಂಡಿರಲಿಲ್ಲ. ಮೃತ ಚಂದನ್ ದಾಸ್ ಯಾವ ರಾಜ್ಯದವರು ಎಂದು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಆದರೆ ಆತನು ಒರಿಸ್ಸಾ ರಾಜ್ಯದವನು ಎಂದು ಮೃತನು ಹೇಳಿದ್ದನು. ಮೃತನು ಅನ್ಯ ರಾಜ್ಯದವನಾಗಿದ್ದುದರಿಂದ ಅವರಿಗೆ ಮನೆ ಬಾಡಿಗೆ ಕೊಡಲು ಬಾಡಿಗೆ ಕರಾರು ಪತ್ರವನ್ನು ಮಾಡಿಕೊಳ್ಳುವುದು ಅವಶ್ಯಕವಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆಧಾರ್ ಕಾರ್ಡ್‌ನ್ನು ತಂದುಕೊಡುತ್ತೇನೆ ಎಂದು ತನ್ನ ಹೆಂಡತಿಯನ್ನು ಊರಿಗೆ ಕಳುಹಿಸಿದ್ದರು ಎಂದು ಹೇಳುತ್ತಾರೆ. ಆಧಾರ್ ಕಾರ್ಡ್ ನ ನಕಲನ್ನು ಆನಲೈನ್ ಮುಖಾಂತರ ಪಡೆಯಬಹುದು ಎಂದರೆ ಸರಿ. ಮೃತ ಚಂದನ್ ದಾಸ್ ಹಾಗೂ ಆತನ ಹೆಂಡತಿ ಬಿಟ್ಟು ಬೇರೆ ಯಾರೂ ಆ ಮನೆಯಲ್ಲಿ ವಾಸಿಸುತ್ತಿರಲಿಲ್ಲ ಎಂದರೆ ಸರಿ. ಆತನ ಯಾವುದೇ ಸ್ನೇಹಿತ ಅಥವಾ ಸಂಬಂಧಿಕರು ಆತನನ್ನು ಆ ಮನೆಯಲ್ಲಿ ಬಂದು ಭೇಟಿಯಾಗುತ್ತಿರಲಿಲ್ಲ ಎಂದರೆ ಸರಿ.

7. ಪೋಲಿಸರು ಮೃತನು ವಾಸವಿದ್ದ ಮನೆಯಲ್ಲಿ ವಸ್ತುಗಳನ್ನು ಜಪ್ತಿಮಾಡಿಕೊಳ್ಳಲಿಲ್ಲ ಎಂದರೆ ಸರಿಯಲ್ಲ. ವಿಸಿ ಮುಖಾಂತರ ಕಂಡುಬರುವ ಆರೋಪಿತರಲ್ಲಿ ಯಾರನ್ನೂ ಈ ಮೊದಲು ನಾನು ನೋಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಖರೀಂ ಎಂಬುವವರನ್ನು ಪೋಲಿಸರು ನಮ್ಮ ಮನೆಗೆ ಕರೆದುಕೊಂಡು ಬಂದಿದ್ದರು ಎಂದು ಹೇಳುತ್ತಾರೆ. ವಿಸಿ ಮುಖಾಂತರ ಕಂಡುಬರುವ ಆರೋಪಿತರಲ್ಲಿ ಯಾರು ಸದರಿ ಖರೀಂ ಎಂದು ಕೇಳಲಾಗಿ ಬಿಳಿ ಅಂಗಿ ಹಾಕಿಕೊಂಡ ಕುಳ್ಳಗಿನ ವ್ಯಕ್ತಿ ಖರೀಂ ಇರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಯು ವಿಸಿಯಲ್ಲಿ ಗುರುತಿಸಿದ ಆರೋಪಿ 1 ನೇ ಆರೋಪಿ ಆಗಿರುತ್ತಾನೆ ಎಂದು ಆರೋಪಿ ಪರ ವಕೀಲರು ನಿವೇದಿಸಿರುತ್ತಾರೆ. ಆರೋಪಿಯನ್ನು ಪೋಲಿಸರು ಮನೆಯ ಹತ್ತಿರ ಏಕೆ ಕರೆದುಕೊಂಡು ಬಂದರು ನನಗೆ ಗೊತ್ತಿಲ್ಲ. ಪೋಲಿಸರ ಮುಂದೆ ಈ ಬಗ್ಗೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು